ಅಗ್ರಿಮೆಂಟ್ ವಿವರ ಬಹಿರಂಗಪಡಿಸಬೇಕು, ಹಾಗೂ ಆ ಕಂಪನಿಗಳ ಪ್ರತಿನಿತ್ಯದ ಉತ್ಪಾದನಾ ಪ್ರಮಾಣದ ಬಗ್ಗೆ ಖಚಿತಪಡಿಸಬೇಕು, ಈ ಕಾರ್ಖಾನೆಗಳಿಂದ ಜರೂರಾಗಿ ಪಂಚಾಯಿತಿಗೆ ಹಣ ಕೊಡಿಸಲು ಸರ್ಕಾರ ಕ್ರಮ ಕೈಗೊಳಬೇಕು.

ಶ್ರೀ ಯು. ಭೂಪತಿ.— ಅಧ್ಯಕ್ಷರೇ, ಇಷ್ಟು ಜನ ಇದ್ದರೂ ಉತ್ತರ ಕೊಡುವುದಕ್ಕೆ ಯಾರೂ ತಯಾರಿಲ್ಲ.

ಅಧ್ಯಕ್ಷರು.— ಸಮಾಧಾನವಾಗಿರಿ. ಕಡೆಯ ದಿವಸವಾದರೂ ನಿಮಗೆ ಸಮಾಧಾನ ಇಲ್ಲವಲ್ಲ.

ಶ್ರೀ ಎಂ. ರಘುಪತಿ. — ಸಿಮೆಂಟ್ ಕಂಪೆನಿಯಿಂದ ಹಣ ಒದಗಿಸಿಕೊಡಬೇಕೆಂದು ಹೇಳಿದ್ದಾರೆ. ಸಿಮೆಂಟ್ ಕಂಪನಿಯವರ ಹತ್ತಿರ ವ್ಯವಹಾರ ಮಾಡಿ ಏನಾದರೂ ಒದಗಿಸಿಕೊಡುವುದಕ್ಕೆ ಸಾಧ್ಯವೇ ಎಂಬುದನ್ನು ನೋಡುತ್ತೇವೆ.

೬) ಉಳ್ಳಾಲ ಕ್ಷೇತ್ರದ ಮಂಗ್ನೂರು ಅಂಬ್ಲಮೊಗ್ರು ರಸ್ತೆಯನ್ನು ಡಾಂಬರೀಕರಿಸುವುದರ ಬಗ್ಗೆ

೧-೦೦ ಪಿ. ಎಂ.

† ಶ್ರೀ ಬಿ. ಎಂ. ಇದಿನಬ್ಬ.— ಮಾನ್ಯ ಅಧ್ಯಕ್ಷರೇ, ಮಂಗಳೂರು ತಾಲ್ಲೂಕಿನ ಉಳ್ಳಾಲ ಕ್ಷೇತ್ರದಲ್ಲಿ ಮುನ್ನೂರು, ಅಂಬ್ಲಮೊಗ್ರು ೭ ಕಿಲೋಮೀಟರ್ ರಸ್ತೆ, ಪಾವೂರು ಪಿನೊಳಿ ೮ ಕಿಲೋ ಮೀಟರ್ ರಸ್ತೆಗಳು ಭಾರಿ ನಾ ದುರಸ್ತಿಯಲ್ಲಿರುತ್ತವೆ. ಈ ಕ್ಷೇತ್ರದಲ್ಲಿ ಈ ಎರಡು ರಸ್ತೆಗಳೇ ಅತ್ಯಂತ ಪ್ರಾಮುಖ್ಯವಾದ್ದು. ಈ ರಸ್ತೆಗಳಲ್ಲಿ ಸಿಟಿ ಬಸ್ಸುಗಳು ಓಡಾಡುತ್ತವೆ. ನೂರಾರು ವಿದ್ಯಾರ್ಥಿಗಳು, ಕಾರ್ಮಿಕರು, ಸಾರ್ವಜನಿಕರು ಓಡಾಡುವ ರಸ್ತೆಗಳು ಹೊಂಡಗಳಿಂದ, ಕೆಸರಿನಿಂದ ತುಂಬಿ ಬಹಳ ನಾ ದುರಸ್ತಿಯಲ್ಲಿರುವುದನ್ನು ಕಳೆದ ಎರಡು ವರ್ಷಗಳಿಂದ ವಿಧಾನ ಸಭೆಯಲ್ಲಿ ಹೇಳುತ್ತಾ ಬಂದರೂ ಇನ್ನೂ ಇದಕ್ಕೆ ಡಾಮರು ಹಾಕಿರುವುದಿಲ್ಲ, ಜಲ್ಲಿ ಹಾಕಿ ಕೆಲ ಕಡೆ ಹಾಗೇಯೇ ಬಿಟ್ಟು ಬಿಡಲಾಗಿದೆ. ಭಾರಿ ಜನಸ್ತೋಮವು ಸಂಚಾರವಿರುವ ಈ ಎರಡು ರಸ್ತೆಗಳ ದುರಸ್ತಿ ಮತ್ತು ಡಾಮರ ಹಾಕುವ ಕೆಲಸವನ್ನು ಕೂಡಲೇ ಪ್ರಾರಂಭಿಸಬೇಕಾಗಿದೆ. ಈ ಕುರಿತು ಲೋಕೋಪಯೋಗಿ ಸಚಿವರ ಗಮನವನ್ನು ಸೆಳೆಯುಬಯಸುತ್ತೇನೆ.

ಶ್ರೀ ಎಂ. ರಘುಪತಿ.— ಮಾನ್ಯ ಲೋಕೋಪಯೋಗಿ ಸಚಿವರು ಮೇಲ್ಮನೆಯಲ್ಲಿದ್ದಾರೆ. ಅವರ ಗಮನಕ್ಕೆ ಈ ವಿಚಾರವನ್ನು ತಂದು ಸೂಕ್ತ ಉತ್ತರವನ್ನು ಮಾನ್ಯ ಸದಸ್ಯರಿಗೆ ಕಳುಹಿಸಿ ಕೊಡುವಂತೆ ತಿಳಿಸುತ್ತೇನೆ.

೭) ಬೀಳಗಿ ತಾಲ್ಲೂಕಿನಲ್ಲಿ ಮುಳುಗಡೆಯಾಗಲಿರುವ ೩೦ ಹಳ್ಳಿಗಳ ಜನರಿಗೆ ಪರಿಹಾರವನ್ನು ಒದಗಿಸುವುದರ ಬಗ್ಗೆ

ಶ್ರೀ ಬಾಬುರೆಡ್ಡಿ ವಿ. ತುಂಗಳ್.—ಮಾನ್ಯ ಅಧ್ಯಕ್ಷರೇ, ಕೃಷ್ಣ ಮೇಲ್ದಂಡೆಯೋಜನೆ ಯಡಿಯಲ್ಲಿ ಬೀಳಗಿ ತಾಲ್ಲೂಕಿನ ೩೫ ಹಳ್ಳಿಗಳು ಮುಳುಗಡೆಯಾಗಲಿದ್ದು ಈ ಎಲ್ಲ ಹಳ್ಳಿಗಳ ಪೊಲ ವ ನೆಗಳನ್ನು ಕಳೆದುಕೊಳ್ಳುತ್ತಿರುವ ಜನರಿಗೆ ಪರಿಹಾರವನ್ನು ಒದಗಿಸಿ ಅನುಕೂಲ ಮಾಡಿ ಕೊಡುವ ದೃಷ್ಟಿಯಿಂದ ಹಾಗೂ ಅವರಿಗೆ ಪುನರ್ವಸತಿ ವ್ಯವಸ್ಥೆ ಮಾಡಲು ಎರಡು ವರ್ಷಗಳ ಹಿಂದೆ ಅಲ್ಲಿ ಸರ್ಕಾರ ವಿಶೇಷ ಭೂಸ್ವಾಧೀನ ಅಧಿಕಾರಿಗಳ ಕಛೇರಿಯನ್ನು ತೆರೆದಿದೆ. ಸಂತ್ರಸ್ತ ಜನರಿಗೆ ಪರಿಹಾರ ಒದಗಿಸುವ ಕಾರ್ಯ ಈ ಕಛೇರಿಯಂ ಮುಖಾಂತರ ನಡೆದಿದೆ. ಈಗ ಈ ಕಛೇರಿಯನ್ನು ಒಮ್ಮೆಲೆ ಇಲ್ಲಿಂದ ಸ್ಥಳಾಂತರಿಸಿ ಅದನ್ನು ಬಾಗಲಕೋಟೆಗೋ ಅಥವಾ ಆಲಮಟ್ಟಿಗೋ ಸ್ಥಳಾಂತರಿಸುವ ನಿರ್ಣಯವನ್ನು ಸರ್ಕಾರ ಮಾಡಿದೆ ಎಂದು ಕಂಡು ಬಂದಿದೆ. ಇದು ನಿಜವೇ ಆಗಿದ್ದಲ್ಲಿ ಅದು ಅತ್ಯಂತ ವಿಷಾದಕರ ಸಂಗತಿ.

ನಿಜವಾಗಿಯೂ ಈ ಭೂ ಸ್ವಾಧೀನ ಅಧಿಕಾರಿಗಳ ಕಾರ್ಯ ಬಹುಮಟ್ಟಿಗೆ ಮೇಲೆ ಅಂದರೆ ಯೋಜನೆಯ ಎರಡನೆಯ ಅಂತ ಆರಂಭವಾದಾಗ ಅಂದರೆ ಮುಳುಗಡೆಯ ಪ್ರದೇಶ ದಿಂದ ಜನರನ್ನು ಪುನರ್ವಸತಿ ಕೇಂದ್ರಗಳಿಗೆ ಸ್ಥಳಾಂತರಿಸುವುದು. ಅವರಿಗೆ ಪರಿಹಾರವನ್ನು ಒದಗಿಸು